Regd No B C 155 29-1-1970

SATYAVADI Daily, MYSORE 4 ★ 53rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಪ್ರಕಟಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಚಂಡಿಘರ ಬಗ್ಗೆ ಶನಿವಾರ ಸರಕಾರದ ನಿರ್ಣಯ

ನೇತ್ರದಾನಿ ಡಾ॥ ಎಂ ಸಿ ಮೋದಿ

ನೇತ್ರದಾನಿ ಪದ್ಮಭೂಷಣ ಡಾ ॥ ಎಂ. ಸಿ ಮೋದಿಯವರು (ರಾಷ್ಟ್ರಾಧ್ಯಕ್ಷರಿಗೆ ಗೌರವಾರ್ಥಕ ನೇತ್ರ ವೈದ್ಯರು) ಸುಹಾರಾಷ್ಟ್ರದ ಜಯಸಿಂಗ್‌ಪುರದಲ್ಲಿ ಫೆಬ್ರವರಿ 2 ರಂದು ಉಚಿತ ನೇತ್ರ ಚಿಕಿತ್ಸಾ ಶಿಬಿರ ನಡೆಸುವರು.

●

ಸಾಗಾಣಿಕೆ ಶುಲ್ಕ

ಮೈಸೂರು— ಪೌರಸಭೆ ಗಡಿ ಆಚೆ ಪದಾರ್ಥಗಳನ್ನು ಆಚೆ ಸಾಗಿಸುವ ಲಾರಿಗಳಿಗೆ ರೂ 2, ಮತ್ತಿತರ ವಾಹನಗಳಿಗೆ ರೂ 1 ಸುಲ್ಕವನ್ನು ಪೌರಸಭೆ ವಿಧಿಸುವುದು.

○

ಮೈಸೂರು ವಿಶ್ವವಿದ್ಯಾಲಯದ ಪದವೀದಾನ ಸಮಾರಂಭ

ಮೈಸೂರು— ಮಾನ್ಸೆ ಸಂಜೆ ಮಾನಸ ಗಂಗೋತ್ರಿಯಲ್ಲಿ ಬಯಲು ಮಂಟಪದಲ್ಲಿ ಪದವೀದಾನ ಸಮಾರಂಭವು ನೆರೆವೇರಿತು

ಹೊಸ ಪದವೀಧರರನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಮೈಸೂರು ಮತ್ತು ಕರ್ನಾಟಕಕ್ಕೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ವಿವರಿಸಿ, ಇಂದು ಭಾರತಕ್ಕೆ ಸೂಕ್ತವಾದ ಉಪದೇಶವನ್ನು ಭಾರತದ ವಿದ್ಯಾಮಂತ್ರಿ ಡಾ॥ ವಿ ಕೆ ಆರ್ ವಿ ರಾವ್ ಮಾಡಿದರು – ಕುಲಪತಿ ಶ್ರೀ ಧನುಷ್ಕೋಟಿ ರಾಮ. ಮತ್ತು ಡಾ ॥ ವಿ ಕೆ ಆರ್ ವಿ ರಾವ್ ಕನ್ನಡದಲ್ಲೇ ಮಾತನಾಡಿದ್ದು ಹರ್ಷದಾಯಕವು – ಪ್ರೊ ॥ ಎಸ್ ವಿ ರಂಗಣ್ಣ. ಡಾ ॥ ಕೆ ಎಲ್ ಶ್ರೀಮಾಲಿ, ಪ್ರೊ ॥ ಡಿ ಎಲ್ ನರಸಿಂಹಾಚಾರ್, ಶ್ರೀ ಎ ನ ಕೃಷ್ಣರಾವ್, ಶ್ರೀ ಗುಬ್ಬಿ ವೀರಣ್ಣನವರಿಗೆ ಡಾಕ್ಟರ್ ಆಫ್ ಲಿಟರೆಚರ್ ಪ್ರಶಸ್ತಿಯೂ ಡಾ ! ಎ ಆರ್ ಗೋವಾಲಯ್ಯಂಗಾರ್ ರವರಿಗೆ ಡಾಕ್ಟರ್ ಆಫ್ ಸೈನ್ಸ್ ಪ್ರಶಸ್ತಿಯೂ ಕೊಡಲಾಯಿತು – 5163 ಮಂದಿ ವಿವಿಧ ಪದವಿ ಪಡೆದರು – ಸ್ವರ್ಣ ಟಿಕೆಂಬಿ ಪದಕ ಮಾರಾಟದಿಂದ ರೂ 1000 ದೊರತಿತ್ತು.

ಅಸ್ಪೃಶ್ಯತೆ

ನವದೆಹಲಿ— ಅಸ್ಪೃಶ್ಯತೆ ಇಚರಣೆಗೆ ಹೆಚ್ಚು ಶಿಕ್ಷೆ ವಿಧಿಸುವ ಶಾಸನವನ್ನು ಪಾರ್ಲಿಮೆಂಟಿನಲ್ಲಿ ತರಲು ಯೋಜಿಸಲಾಗಿದೆ – ಪೂರಿ ಶಂಕರಾಚಾರ್ಯರು ಹೇಳಿದ ಮೂರು ತುಗಳೂ ತಕ್ಕೀರಾಗುವಂತೆ ಮಾಡಲಾಗುವುದು

★

ಸ್ವಹಿತಸಾಧನೆ

ಬೆಂಗಳೂರು— ಇಂದಿರಾ ಕಾಂಗ್ರೆಸ್ಸಿನಲ್ಲೂ ಸ್ವಪ್ರಯೋಜನ ಸಾಧಕರು ಇರುವುದು ದುರದೃಷ್ಟಕರವೆಂದೂ, ಈ ರೀತಿಯಾದರೆ ನಾವು ಸಿಂಡಿಕೇಟ್ ಕಾಂಗ್ರೆಸ್ಸನ್ನು ಸೋಲಿಸಲಾಗುವುದಿಲ್ಲವೆಂದೂ ಶ್ರೀ ಹನುಮಂತಯ್ಯನವರು ಹೇಳಿದರು.

○

ಸದಸ್ಯರನ್ನು ಹೊರಗೆ ಹಾಕಲಾಯಿತು

ಬೆಂಗಳೂರು— ಶಾಸನ ಸಭೆ ಸ್ಪೀಕರರ ಸೇವೆ ಪಕ್ಷಪಾತ ಆರೋಪಿಸಿದ ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯ ಶ್ರೀ ಸೇನಾಕರನ್ನು ನಿನ್ನೆ ಸಭೆಯಿಂದ ಹೊರಗೆ ಕಳಿಸಲಾಯಿತು – ಮತ್ತಿಬ್ಬರು ಪ್ರತಿಭಟಿಸಿ ಸಭೆಯಿಂದ ಹೊರಕ್ಕೆ ಹೋದರು.

○

ಜೆಂಡೀಘರಕ್ಕಾಗಿ

ಆನ್ನತಪರಗೊಲ್ಲಿ ಉಪವಾಸವನ್ನಾಡುತ್ತಿರುವ ಸ್ವದೇಶದಲ್ಲಿ. ಕೊಲ್ಲುಗಲಲಿ ಚಿಂತೆ ಮಾಡುತ್ತಿರುವುದರ ಕಾರಣವಿಷ್ಟೆ : ಗುಟಕು ಗುಟಕು ನೀರು ಕೇವೆಯ ವಿಧಾನ – ಮತ್ತಿಬ್ಬರು ಉಪವಾಸಕ್ಕೆ ಸೇರಿದರು — ಪಂಜಾಬು ಸರದ ವಿದ್ಯಾರ್ಥಿಗಳು ಆನ್ನತಪರದ ಗೇಟ್ಸ್ ಮುರ್ಷ ನುತ್ತು ಸೋಷ್ಯಾಸೀಸಿನ ಮೇಲೆ ಕಲ್ಲು ಬೀರಿದರು – ರಾಂಭಾಗ್ ಕೋಟೆದಲಿನ ಗಾಂಧಿ ಸ್ಟ್ಯಾಚುವನ್ನು ಜಖಂಗೊಳಿಸಿದರು.

ತಳವಾಡಿ ಚಳವಳಗಾರರ ದಸ್ತಗಿರಿ

ಕೊಯಮುತ್ತೂರು—ಸ್ರತಿಬಂಧಕಾಜ್ಞೆ ಉಲ್ಲಂಘಿಸಿ ಕನ್ನಡಧ್ವಜ ಹಾರಿಸಲು ಶ್ರೀ ವಾಟಾಲ್ ನಾಗರಾಜರ ಮುಖಂಡತ್ವದಲ್ಲಿ ಬಂದ 75 ಮಂದಿ ಕನ್ನಡ ಚಳವಳಗಾರರನ್ನು ತಳವಾಡಿಯಲ್ಲಿ ತಮಿಳುನಾಡು ಪೋಲೀಸರು ದಸ್ತಗಿರಿ ಮಾಡಿದರು – ಪೋಲೀಸರು ಅಶ್ರುವಾಯು ಪ್ರಯೋಗಿಸಿ ಲಾಠಿ ಛಾರ್ಜನ್ನು ಮಾಡಿದರು.

★

ಮದ್ರಾಸು ಮುಖ್ಯಮಂತ್ರಿಗಳ ಆಸ್ತಿ

ಮದರಾಸು— 1969 ನೇ ಮಾರ್ಚಿ 31 ರಲ್ಲಿ ತಮಿಳು ಮಂತ್ರಿಗಳಲ್ಲಿ 5 ಮಂದಿಗೆ ಬ್ಯಾಂಕಿನಲ್ಲಿ ಲೆಖ್ಖವೇ ಇಲ್ಲವೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು – ಮುಖ್ಯ ಮಂತ್ರಿ ಕರುಣಾನಿಧಿಯವರಿಗೆ ಬ್ಯಾಂಕಿನಲ್ಲಿ ರೂ 1142.47 ಇತ್ತು : ರೂ. 334958 96 ಸಾಲಸೋಲ ಇತ್ತು : ಅವರ ಚಿರ ಸ್ವತ್ತು ನಗರದಲ್ಲಿ ಒಂದು ಮನೆ ತಂಜಾವೂರು ಜಿಲ್ಲೆಯಲ್ಲಿ 16 60 ಎಕ್ರೆ ವ್ಯವಸಾಯ ಭೂಮಿ.

★ ಜನವರಿ 3 ರಂದು ರಾಜಸ್ಥಾನದ ಸರ್ಕಾರವು ರಿಜರ್ವ್ ಬ್ಯಾಂಕಿನಲ್ಲಿ ರೂ.ದಿ 50 66 ಕೋಟಿ ಓವರ್‌ಡ್ರಾಫ್ಟ್ ಹೊಂದಿದ್ದು ಶಾಸನಸಭೆಯಲ್ಲಿ ತಿಳಿಸಲಾಯ್ತು.

ಚಂಡಿಘರ ಬಗ್ಗೆ ನಿರ್ಧಾರ

ನವದೆಹಲಿ— ಚಂಡಿಘರ ಬಗ್ಗೆ ಸರಕಾರದ ನಿರ್ಧಾರ ಶನಿವಾರ ಪ್ರಕಟವಾಗಬಹುದು – ಅಂದರೆ ಸಂತ ಫತೇಸಿಂಗರ ಪ್ರಾಣಾರ್ಪಣೆ ಯೋಜಿತ ದಿನಕ್ಕೆ 2 ದಿನ ಮುಂಚಿತವಾಗಿರುವುದು.

★

ಎಲ್ಲಿಗೆ ಸೇರುವರೊ !

ಬೆಂಗಳೂರು— ಸುಮಾರು 35 ಮಂದಿ ಹಳೇ ಕಾಂಗ್ರೆಸ್ ಶಾಸಕರು ಕಾಂಗ್ರೆಸ್ಸು ಗುರುತಿನ ಬಗ್ಗೆ ಚುನಾವಣಾ ಕಮಿಷನ್ನಿನ ತೀರ್ಪಿಗೆ ಕಾದಿದ್ದಾರೆಂದೂ, ನಂತರ ಯಾವ ಕಾಂಗ್ರೆಸ್ಸು ಗುಂಪಿಗೆ ಸೇರುವುದೆಂಬುದನ್ನು ನಿರ್ಧರಿಸಲಿರುವರೆಂದೂ ಪಾರ್ಲಿಮೆಂಟಿನ ಹೊಸ ಕಾಂಗ್ರೆಸ್ಸಿನ ಕಾರ್ಯದರ್ಶಿಯವರು ಹೇಳಿರುವರು.

★

ಯಾತ್ರಿಕರ ಮೇಲೆ ತೆರಿಗೆ

ಕಾರವಾರ – ಸುರಾ ತಾಲ್ಲೂಕಿನ ಉಲ್ವಿಯಲ್ಲಿ ಫೆಬ್ರವರಿ 12 ರಿಂದ 21 ರವರೆಗೆ ನಡೆಯುವ ಜಾತ್ರೆಗೆ ಬರುವವರಿಗೆ 15 ವರ್ಷ ಮೇಲ್ಪಟ್ಟವರಿಗೆ 25 ಪೈಸೆ, 15 ವರ್ಷಕ್ಕೆ ಕಡಮೆಯವರಿಗೆ 15 ಪೈಸೆ ಯಾತ್ರೆ ತೆರಿಗೆ ವಿಧಿಸಲಾಗುವುದು.

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ಮಾರಾಟಗಾರರು :

ಬಾಹುಸಾರ್ ಕಂಪೆನಿ, ಓಲ್ಡ್ ಬ್ಯಾಂಕ್ ರೋಡ್, ಮೈಸೂರು

ಬಾಹುಸಾರ್ ಕಂಪೆನಿ, ನೂರಡಿ ರಸ್ತೆ, ಮೈಸೂರು-4

ಇಂಗ್ಲೀಷು ತೆಗೆಯಿರಿ

ಉಜ್ಜಯಿದಿ— ' ಇಂಗ್ಲೀಷು ತೆಗೆಯಿರಿ ' ಸೇನೆಯನ್ನು ಸಮಾಜವಾದಿ ಸಂ ಸ್ಥಾಪಿಸಿದೆ

ಗೋರಿ ಪುನರ್ನಿರ್ಮಾಣಕ್ಕೆ

ಬೊಂಬಾಯಿ— ಮೈಸೂರು ರಾಜ್ಯದ ಶಿವಮೊಗ್ಗ ಜಿಲ್ಲೆಯ ಹೊದಿಗೆರೆಯಲ್ಲಿ 1664 ರಲ್ಲಿ ನಿಧನರಾದ ಮರಾಠಿ ಅರಸು ಷಾಜೀ ಮಹಾರಾಜರ ಗೋರಿಯನ್ನು ಪುನ ರ್ನಿರ್ಮಾಣ ಮಾಡಲು ' ಮರಾಠ ಮಂಡಿ " ಸಾಂಸ್ಕೃತಿಕ ಸಂಸ್ಥೆಯು 50000 ರೂಗಳನ್ನು ಶೇಖರಿಸಲು ಯೋಜಿಸಿದೆ

ಹೆಂಗಸಿನ ವಿಷಯದಲ್ಲಿ

ನಿನಗೆ ಒಳ್ಳೆಯದನ್ನು ಬಯಸುವ ಸ್ತ್ರೀಗಿಂತ, ನಿನಗೆ ಕೆಟ್ಟದನ್ನು ಬ ಯ ಸು ವ ಪುರುಷನೇ ಉತ್ತಮ — ಎಕ್ಲೆಸಿಯಾಸ್ಟಸ್

ಒಬ್ಬ ಹೆಂಗಸಿನ ಕೆಟ್ಟತನಕ್ಕಿಂತ ಬಾಕಿ ಎಲ್ಲ ಕೆಟ್ಟತನವೂ ಅತಿ ಕಡಮೆ — ನ್ಯೂ ಟೆಸ್ಟ್‌ಮೆಂಟ್

ಜೀವಗಳನ್ನು ಹೆಚ್ಚಿಸುವ, ಹೃದಯ ಭೇದಿಸುವ, ಹಣ ಸೆಳೆಯುವುದರಲ್ಲಿ ಮ ಹಿಳೆಯರು ಸಾಭಾವಿಕ ಶಕ್ತಿ ಹೊಂದಿರುವರು

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ

ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00

ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ್ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ ಹೊಂಗನೂರು, ಚಾಮರಾಜನಗರ ತಾಲ್ಲೂ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್, ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್, ಸಾಣಿಡಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು

ಗೋರಕ್ಷಣ ಆಫೀಸ್, ಸತ್ಯವಾದಿಪ್ರೆಸ್ ಚಾಮರಾಜಪುರಂ, ಮೈಸೂರು 4

Quality Printing — Neat Binding

Lakshminarasimha Press

Sivarampet, Mysore

Protect the Cow

Help The Gorakshana

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

ದೇಶದ ಹಿತಕಾಗಿ ಕುಟುಂಬ ಯೋಜನೆ

ವುಡ್‌ಲ್ಯಾಂಡ್ ಅಮೋಘ 4 ನೇ ವಾರ

ಅಮೋಘ ಪ್ರಾರಂಭ

.... ತುಂಬಿದ ಚಿತ್ರಮಂದಿರಕ್ಕೆ ಪ್ರದರ್ಶಿತವಾಗುತ್ತಿದೆ ....

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ನಟವರ್ಗ— ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

[ದಿನ 3 ಪ್ರದರ್ಶನಗಳು]

ಆಪೆರಾ— 23-1-70 ರಿಂದ

.... ಅತ್ಯಮೋಘ ಕನ್ನಡ ಚಿತ್ರ ....

ಭಲೇ ಕಿಲಾಡಿ

ಪಾತ್ರ : ನರಸಿಂಹರಾಜು ರಂಗ ವೆಂಕಟೇಶ್

ಕಥೆ – ಸಂಭಾಷಣೆ : ಹುಣಸೂರ್ ಕೃಷ್ಣಮೂರ್ತಿ

ದಿಗ್ದರ್ಶನ : ಎ. ನಾಗರಾಜ್

ದಿನ 3 ಆಟಗಳು

SHAKTI SUDHA

A Superb Tonic



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ

Edited, Printed & Published by Dharmaprachara Nirata M S Krishna Rao (Proprietor) at the Satvavadi Press Chamarajapuram, Mysore 4